## ವಜ್ರದ ಆಕಾರ

● ಪ್ಲಾನಿಂಗ್ ಆ್ಯಂಡ್ ಮಾರ್ಕಿಂಗ್

ವಜ್ರಗಳ ಪಾಲಿಶ್/ ಸಾಣೆ ಹಿಡಿಯುವ ಮುನ್ನ ಅವುಗಳನ್ನು ಯಾವ ಆಕಾರಕ್ಕೆ ಮಾಡುವುದು ಉತ್ತಮ ಎಂದು ಯೋಜನೆ ಮಾಡುವುದು ಒಂದು ಮುಖ್ಯ ಘಟ್ಟ. ಕಚ್ಚಾ ವಜ್ರದ ಯಾವ ಭಾಗದಲ್ಲಿ ಕಲ್ಮಶಗಳು ಇವೆ, ಯಾವ ಆಕಾರಕ್ಕೆ ಸಾಣೆ ಹಿಡಿದಾಗ ಅವುಗಳ ನಿವಾರಣೆ ಆಗುತ್ತವೆ ಎಂಬ ಯೋಜನಾಬದ್ಧವಾದ ತರ್ಕದ ಮೂಲಕ ಕಚ್ಚಾ ವಜ್ರದ ಮೇಲ್ಮೈಯಲ್ಲಿ ಗುರುತುಹಾಕಿ (ಮಾರ್ಕಿಂಗ್) ತದನಂತರ ಸಾಣೆ ಹಿಡಿಯುವ ವಿಭಾಗಕ್ಕೆ ವರ್ಗಾಯಿಸಲಾಗುತ್ತದೆ.

ವಜ್ರಗಳನ್ನು ವಿಶ್ವದಾದ್ಯಂತ ಹೆಚ್ಚಾಗಿ 11 ಆಕಾರಗಳಲ್ಲಿ ಸಾಣೆ ಹಿಡಿದು ತಯಾರಿಸಲಾಗುತ್ತದೆ. ಅವುಗಳೆಂದರೆ –

●ರೌಂಡ್ ಬ್ರಿಲಿಯಂಟ್ ●ಎಮರಾಲ್ಡ್ ಪಿಯರ್ ●ಓವಲ್ ಹಾರ್ಟ್ ●ಟ್ರೆಲಿಯನ್ ●ಪ್ರಿನ್ಸಸ್ ●ಆಶ್ಚರ್ ●ರೇಡಿಯಂಟ್ ●ಕುಶನ್ ಕಟ್ ●ಮಾರ್ಕ್ವಾಯಿಸ್

ಇದಲ್ಲದೆ ವಿವಿಧ ಫ್ಯಾನ್ಸಿ ಆಕಾರಗಳಲ್ಲಿ ವಜ್ರಗಳೂ ಲಭ್ಯವಿದೆ. ರಫ್ ಡೈಮಂಡ್ ಅನ್ನು ಗಣಿಯಿಂದ ಹೊರತೆಗೆದಾಗ ಯಾವ ಆಕಾರಕ್ಕೆ ಸಾಣೆ ಮಾಡಿದರೆ ಹೆಚ್ಚು ತೂಕದ ಶುಭ್ರ ವಜ್ರ ದೊರೆಯುತ್ತದೋ (ವೇಸ್ಟ್ ಆಗದಂತೆ) ಆ ಆಕಾರಕ್ಕೆ ಸಾಣೆ ಹಿಡಿಯಲಾಗುತ್ತದೆ. ವಿವಿಧ ಆಕಾರಗಳಿಗೆ ವಿವಿಧ ಬೆಲೆ ಇರುತ್ತದೆ.

## ಕೆತ್ತನೆ ನೈಪುಣ್ಯ

ಅಂಚುಗಳು ಒಂದಕ್ಕೊಂದು ಹೊಂದುವಂತೆ ಸಮಾನ ಹಾಗೂ ಸಮಾನಾಂತರವಾಗಿ, ಸರಿಯಾದ ಹೊಳಪಿನ ಮೇಲ್ಮೈ ಬರುವಂತೆ ವಜ್ರವನ್ನು ಸಾಣೆ ಹಿಡಿಯುವುದು ಒಂದು ವಿಶೇಷ ನೈಪುಣ್ಯ. ಉದಾ: ರೌಂಡ್ ಬ್ರಿಲಿಯಂಟ್ ವಜ್ರ ಎಂದು ಗುರುತಿಸಲ್ಪಡುವ ವಜ್ರದಲ್ಲಿ 57 ಮೇಲ್ಮೈಗಳು ಇರಬೇಕಾಗುತ್ತದೆ. ಅವು ಒಂದು ಸೆಂಟ್ ಇರಲಿ ಯಾ 10 ಕ್ಯಾರಟ್‌ನಿಂದ ಮೇಲೆಯೇ ಇರಲಿ ಈ 57 ಮೇಲ್ಮೈಗಳು ಇರದಿದ್ದಲ್ಲಿ ವಜ್ರ ಅಪೂರ್ಣವೆನಿಸುತ್ತದೆ. ಹಾಗೆಯೇ ಅಂಚುಗಳು ಒಂದಕ್ಕೊಂದು ಹೊಂದಿಕೊಳ್ಳದಿದ್ದಲ್ಲಿ ವಜ್ರ ತನ್ನ ಬೆಲೆಯನ್ನು ಕಳಕೊಳ್ಳುತ್ತದೆ. ಸಾಣೆ ಹಿಡಿಯುವಾಗ ಕೆಲವೊಮ್ಮೆ ವಜ್ರದ ಮೇಲ್ಮೈ ಸ್ವಲ್ಪ ಕರಟಿ ಹೋಗುವ ಸಂಭವವಿರುತ್ತದೆ. ಆ ಸಂದರ್ಭದಲ್ಲಿಯೂ ಬೆಲೆ ಕಳೆದುಕೊಳ್ಳುತ್ತದೆ.

## ಕಲರ್

ವಜ್ರಗಳು ನೈಸರ್ಗಿಕವಾಗಿ ವಿವಿಧ ಬಣ್ಣಗಳನ್ನು ಹೊಂದಿರುತ್ತವೆ. ಆಭರಣಕ್ಕೆ ಬಳಸುವ ಗುಣಮಟ್ಟದ ವಜ್ರಗಳು ಬಣ್ಣ ರಹಿತವಾಗಿ ಅಂದರೆ ತಿಳಿ ನೀರಿನಂತೆ ಇದ್ದಷ್ಟು ಅವುಗಳ ಬೆಲೆ ಹೆಚ್ಚುತ್ತದೆ. ವಿವಿಧ ರಾಸಾಯನಿಕ ಮಿಶ್ರಣಗಳು ವಜ್ರದಲ್ಲಿ ಸೇರಿಕೊಳ್ಳುವುದರಿಂದ ವಜ್ರಗಳು ಹಳದಿ, ಕಂದು ಯಾ ಕಪ್ಪು ಬಣ್ಣದಲ್ಲಿಯೂ ಲಭ್ಯವಿದೆ. ವಿಶೇಷ ಸಂದರ್ಭಗಳಲ್ಲಿ ಅಪರೂಪದ ರಾಸಾಯನಿಕಗಳು ಸೇರಿಕೊಂಡಲ್ಲಿ ನೀಲಿ, ತಿಳಿಗೆಂಪು (ಗುಲಾಬಿ), ಹಸಿರು ಬಣ್ಣಗಳಲ್ಲಿಯೂ ವಜ್ರಗಳು ಲಭ್ಯವಾಗುತ್ತದೆ. ಇವುಗಳನ್ನು ಫ್ಯಾನ್ಸಿ ಕಲರ್ ವಜ್ರಗಳು ಎಂದು ಕರೆಯುತ್ತಾರೆ. ಇದು ಅಪರೂಪವಾದ್ದರಿಂದ ಇದಕ್ಕೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ, ಮಾಲ್ಯ ಇರುತ್ತದೆ.

## ಕ್ಲ್ಯಾರಿಟಿ

ಗಣಿಯಿಂದ ಹೊರತೆಗೆದ ಸಾಣೆ ಹಿಡಿಯುವ (ರಫ್) ವಜ್ರಗಳಲ್ಲಿ ಕೇವಲ ಶೇ. 3 ಮಾತ್ರ




ಬಳಕೆಯಲ್ಲಿರುವ ವಜ್ರದ ಆಕಾರಗಳು

ಆಭರಣಕ್ಕೆ ಮಾತ್ರ ಯೋಗ್ಯವಾದವು. ಇವುಗಳನ್ನು ಉಳಿದ ಶೇ. 97 ರಷ್ಟು ವಜ್ರಗಳು ಕೈಗಾರಿಕಾ ಗುಣಮಟ್ಟದವು. ಇವುಗಳನ್ನು ಕೈಗಾರಿಕಾ ಟೂಲ್ಸ್‌ಗಳಲ್ಲಿ ಬಳಕೆ ಮಾಡಲಾಗುವುದು. ಉದಾ: ಬೋರ್‌ವೆಲ್ ಬಿಟ್, ಗ್ಲಾಸ್ ಕಟ್ಟಿಂಗ್ ಟೂಲ್ಸ್, ಚಿನ್ನಾಭರಣಗಳ ತಯಾರಿಕಾ ಟೂಲ್ಸ್, ವಜ್ರ ಕಟ್ಟಿಂಗ್ ಟೂಲ್ಸ್ ಹಾಗೂ ಇತರೆ. ಆಭರಣ ಗುಣಮಟ್ಟದ ವಜ್ರಗಳನ್ನು ಸಾಣೆ ಹಿಡಿಯುವಾಗ ಸಂಪೂರ್ಣ ವಜ್ರ ತಿಳಿನೀರಿನ ಹಾಗೆ ಶುಭ್ರವಾಗಿರಬೇಕು. ಆದರೂ ವಜ್ರಗಳ ಒಳ ಮೈ ಹಾಗೂ ಹೊರಮೈಯಲ್ಲಿ ಕಲ್ಮಶಗಳು ಉಳಿದುಕೊಂಡಲ್ಲಿ ಅವುಗಳ ಬೆಲೆ ಕುಸಿಯುತ್ತದೆ. ಅವು ವಜ್ರದ ಯಾವ ಭಾಗದಲ್ಲಿದೆ ಎನ್ನುವುದರ ಮೇಲೆ ಕೂಡಾ ಬೆಲೆ ನಿರ್ಧರಿತವಾಗುತ್ತದೆ.

## ಅನ್‌ಕಟ್ ಡೈಮಂಡ್

ಇತ್ತೀಚೆಗಿನ ದಿನಗಳಲ್ಲಿ ಈ ತರಹದ ಡೈಮಂಡ್ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಇದು ಗಣಿಯಿಂದ ಆರಿಸಿ ತಂದು ಪ್ರಥಮ ಸಂಸ್ಕರಣೆ ಮಾಡಿದ ಡೈಮಂಡ್‌ನ್ನು ಆಭರಣೋದ್ಯಮದಲ್ಲಿ ಅನ್‌ಕಟ್ ಡೈಮಂಡ್ ಎಂದು ಕರೆಯುತ್ತಾರೆ. ಕಟ್, ಕಲರ್, ಕ್ಲ್ಯಾರಿಟಿ, ಕ್ಯಾರಟ್ ಅನ್ನು ಹೊಂದಿಕೊಂಡು ಅದನ್ನು ವಿಂಗಡಿಸಲಾಗುತ್ತದೆ. ಅನ್‌ಕಟ್ ಡೈಮಂಡ್‌ನ ಆಭರಣಗಳು ಕೂಡಾ ಬಹಳ ಸುಂದರವಾಗಿ ನೋಡಲು ಮನೋಹರವಾಗುತ್ತದೆ.

## ವಜ್ರ ವಿಷವೇ?

ಖಂಡಿತವಾಗಿಯೂ ಅಲ್ಲ, ವಜ್ರದ ಮೂಲವಸ್ತು ಇಂಗಾಲ (ಕಾರ್ಬನ್). ಅತೀ ಶುದ್ಧವಾದ ಇಂಗಾಲಗಳು ಎರಡು. ಮೊದಲನೆಯದು ವಜ್ರ. ಎರಡನೆಯದು ಪೆನ್ಸಿಲ್‌ನಲ್ಲಿ ಬಳಸುವ ಗ್ರಾಫೈಟ್. ಆದರೆ ವಜ್ರವನ್ನು ಪುಡಿ ಮಾಡಿ ಸೇವಿಸಿದರೆ ಅದರ ಗಾಜಿನಪುಡಿ ದೇಹದೊಳಗೆ ಸೇರಿದಾಗ ಆಗುವಂತೆ ಆಂತರಿಕ ರಕ್ತಸ್ರಾವದಿಂದ ವ್ಯಕ್ತಿ ಸಾಯುವ ಸಾಧ್ಯತೆ ಇಲ್ಲದಿಲ್ಲ.

## ವಜ್ರಕ್ಕೆ ಸ್ವಂತ ಬೆಳಗುವ ಶಕ್ತಿ ಇದೆಯೇ?

ಇಲ್ಲ, ಬೆಳಕಿನ ಕಿರಣ ವಜ್ರದ ಮೇಲೆ ಬಿದ್ದಾಗ ಮಾತ್ರ ನಕ್ಷತ್ರದಂತೆ ಹೊಳೆಯುತ್ತದೆ.

## ಡೈಮಂಡ್‌ನ ವೈಶಿಷ್ಟ್ಯ

ಡೈಮಂಡ್ ಆಭರಣಗಳಲ್ಲಿ ಕೊಳೆ ನಿಂತರೆ ಆ್ಯಸಿಡ್ ವಾಶ್ ಮಾಡಿದರಾಯಿತು. ಫಳ ಫಳ ಮಿನುಗುತ್ತದೆ. ಒಂದೇ ಆಭರಣ ತೊಟ್ಟು ಹಳತಾದಾಗ ಬೇರೆ ವಿನ್ಯಾಸದ್ದು ಬೇಕೆಂದಾಗ ಕುಶಲಕರ್ಮಿಗಳು ಬಹಳ ಜಾಗರೂಕತೆಯಿಂದ ಡೈಮಂಡ್ ಅನ್ನು ಪ್ರತ್ಯೇಕಿಸಿ ಪುನಃ ಹೊಸ ಆಭರಣವನ್ನು ಮಾಡಬಹುದು. ವಜ್ರ ಯಾವತ್ತೂ ಸವೆಯುವುದಿಲ್ಲ. ಆದರೆ ಜಾಗರೂಕತೆಯಿಂದ ಆಭರಣವನ್ನು ತೆಗೆದು ಹಾಕಿ ಮಾಡಬೇಕು. ಜೊತೆಗೆ ಬೀರುವಿನಲ್ಲಿ ಇಡುವಾಗ ನಾಜೂಕಿನಿಂದ ಪೆಟ್ಟಿಗೆಯಲ್ಲಿ ಇಡಬೇಕು. ■

